- -

ಎಮ್ ವಿ ಸಿ ನಂಃ 36/2021 ಆರ್.ಡಬ್ಲ್ಯೂ (1)

**ದಿನಾಂಕಃ 21-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ ಃ ಎದುರುದಾರರ ಪರ ವಕೀಲರಿಂದಃ**

ಪ್ರಮಾಣ ಪತ್ರದಲ್ಲಿ ಬರೆದ ವಿಷಯ ನಿಜವಿರುತ್ತದೆ. ಅದಕ್ಕೆ ನನ್ನ ಸಹಿ ಇದ್ದು ಅದು ನನ್ನ ಮಾಹಿತಿ ಪ್ರಕಾರ ಸರಿ ಇರುತ್ತದೆ. ಅದನ್ನು ನನ್ನ ಮುಖ್ಯ ವಿಚಾರಣೆ ಅಂತಾ ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ಗಾಯಳು ದುರುಗಪ್ಪನ ಕುರಿತು ವೈಯಕ್ತಿಕ ಮಾಹಿತಿ ಇಲ್ಲ. ಅವರು ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಎಂದು ಮಾಹಿತಿ ಇಲ್ಲ ಎಂದರೆ ಸರಿ. ಮುನಿರಾಬಾದ ಪೊಲೀಸ್ ಠಾಣೆಯ ಹದ್ದಿಯಲ್ಲಿ ನನ್ನ ವಿರುದ್ಧ ಗುನ್ನಾ ನಂ. 276/2020 ರಡಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ದುರುಗಪ್ಪ ದನಕನದೊಡ್ಡಿ ಕ್ರಾಸ್ ನಿಂದ ಬೂದುಗುಂಪಾ ಕ್ರಾಸ್ ಕಡೆಗೆ ತನ್ನ ಮೋಟಾರ್ ಸೈಕಲ್ ನಂ. ಕೆಎ 37/ಇಎ 0536 ಇದರ ಮೇಲೆ ಹೊರಟ್ಟಿದ್ದ ಎನ್ನುವುದು ನನಗೆ ಗೊತ್ತಿಲ್ಲ. ಆದರೆ ದನಕನದೊಡ್ಡಿ ಕ್ರಾಸ್ ನಲ್ಲಿ ಆತ ಅಡ್ಡ ಬಂದು ನನ್ನ ಬಸ್ಸಿನ ಮುಂದಿನ ಎಡಭಾಗದಲ್ಲಿ ಡಿಕ್ಕಿ ಪಡಿಸಿದ್ದಾನೆ.

2. ಆ ಕ್ರಾಸ್ ನಲ್ಲಿ ಸಾಕಷ್ಟು ಜನ ಅಡ್ಡಾಡುತ್ತಾರೆ ಎಂದರೆ ಸರಿ. ವಾಹನಗಳು ಕೂಡ ಅಡ್ಡಾಡುತ್ತವೆ ಎಂದರೆ ಸರಿ. ನಾನು ಅತೀ ಜೋರಾಗಿ ಹಾಗೂ ಅಡ್ಡಾ ದಿಡ್ಡಿ ಬಸ್ಸು ಓಡಿಸಿ ಆತನಿಗೆ ಠಕ್ಕರ್ ಕೊಟ್ಟೆ ಎಂದರೆ ಸರಿಯಲ್ಲ. ಅಲ್ಲಿ ರೋಡ್ ಹಂಪ್ಸ ಇವೆ ಬಸ್ಸ ಜೋರಾಗಿ ಹೋಗಲು ಸಾದ್ಯ ಇಲ್ಲ ಎನ್ನುತ್ತಾರೆ. ನನ್ನದೇ ತಪ್ಪಿನಿಂದ ಅಪಘಾತವಾಗಿದೆ ಎಂದು ಪೊಲೀಸರು ನನ್ನ ಮೇಲೆ ದೋಷರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿ.

3. ಈ ಗಾಯದಿಂದಾಗಿ ಅರ್ಜಿದಾರನ ತೊಡೆಯವರೆಗೆ ಕಾಲು ಕಟ್ ಮಾಡಲಾಗಿದೆ ಎಂದರೆ ಗೊತ್ತಿಲ್ಲ. ಆತ ಸರಿಯಾಗಿ ಚಿಕಿತ್ಸೆ ಪಡೆಯದೇ ಇದ್ದ ಕಾರಣ ಹಾಗೆ ಆಗಿರಬಹುದು. ಆತನದ್ದೆ ತಪ್ಪು ಎಂದು ನಾನು ಫಿರ್ಯಾದಿ ಕೊಟ್ಟಿಲ್ಲ. ಪೊಲೀಸರು ನನ್ನಿಂದ ಫಿರ್ಯಾದಿ ತೆಗೆದುಕೊಂಡಿಲ್ಲ. ಫಿರ್ಯಾದಿ ಕೊಡಲು ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನದೇ ತಪ್ಪಿನಿಂದ ಅಪಘಾತವಾಯಿತು ಎಂದರೆ ಸರಿಯಲ್ಲ. ಅದಕ್ಕಾಗಿ ನಾನು ಸುಮ್ಮನಾದೆ ಎಂದರೆ ಸರಿಯಲ್ಲ.

ಇಲಾಖಾ ವಿಚಾರಣೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಕೊಡುವುದರಿಂದ ತಪ್ಪಿಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**